# ದಾನದ ಮಹಿಮೆ

ಎ. ಲಕ್ಷ್ಮೀಶ್

**ಸ**ತ್ಯಪುರಿ ಎಂಬುದೊಂದು ಊರು. ಅಲ್ಲಿ ಧರ್ಮಯ್ಯನೆಂಬ ಒಬ್ಬ ವ್ಯಾಪಾರಿ ಇದ್ದ. ಅವನ ಹಿಂದಿನವರು ಗಳಿಸಿದ ಐಶ್ವರ್ಯ ತಲೆತಲೆಮಾರು ಅನುಭವಿಸಿ ಉಳಿಯುವಷ್ಟು ಇತ್ತು. ಅವನ ತಲೆಯಲ್ಲಿ ಒಂದು ವಿಚಿತ್ರ ಯೋಚನೆ ಬಂದಿತು. ಅದರಂತೆ ಅವನು ಒಂದು ಹೊಸ ವ್ಯಾಪಾರ ಆರಂಭಿಸಿದ. ಅದು ಪುಣ್ಯವನ್ನು ಕೊಂಡುಕೊಳ್ಳುವ ವ್ಯಾಪಾರ. ಹಣದ ಅಗತ್ಯ ಇದ್ದವರು ಎಷ್ಟೆಷ್ಟೋ ದೂರದಿಂದ ಬಂದು, ತಮ್ಮ ಪುಣ್ಯವನ್ನು ಮಾರಿ ದುಡ್ಡು ತೆಗೆದುಕೊಂಡು ಹೋಗುತ್ತಿದ್ದರು.

ಆ ಊರಿನಿಂದ ಸ್ವಲ್ಪ ದೂರದಲ್ಲಿ ಗುರೂರು ಎಂಬ ಇನ್ನೊಂದು ಹಳ್ಳಿ ಇತ್ತು. ಅಲ್ಲಿ ರಾಮಯ್ಯನೆಂಬ ಒಬ್ಬ ಬಡ ಕೂಲಿಕಾರ್ಮಿಕ ಇದ್ದ. ಅವನು ಎಷ್ಟೇ ಕಷ್ಟಪಟ್ಟರೂ ಹೊಟ್ಟೆಗಾಗುವಷ್ಟು ಮಾತ್ರ ಆದಾಯ ಬರುತ್ತಿತ್ತು. ಅವನ ಹೆಂಡತಿ ಸೀತಮ್ಮನಿಗೆ ಧರ್ಮಯ್ಯನ ವಿಶಿಷ್ಟ ವ್ಯಾಪಾರದ ಸುದ್ದಿ ತಿಳಿಯಿತು. ಅವಳು ತನ್ನ ಪತಿಯನ್ನು, "ಪುಣ್ಯ ಕೊಟ್ಟು ದುಡ್ಡು ತನ್ನಿ. ಮೈಮುಚ್ಚಿಕೊಳ್ಳುವ ಬಟ್ಟೆಯನ್ನಾದರೂ ತೆಗೆದುಕೊಳ್ಳೋಣ, ಹೊಟ್ಟೆ ತುಂಬಾ ಊಟ ಮಾಡೋಣ" ಎಂದು ಪ್ರತಿದಿನ ಬೇಡುತ್ತಿದ್ದಳು. "ನನ್ನ ಹತ್ತಿರ ಏನಿದೆ? ಸಂಸಾರ ನಡೆಸುವುದಕ್ಕೇ ಆಗದ ನಾನು ಏನು ತಾನೆ ಪುಣ್ಯ ಮಾಡಿದ್ದೀನಿ, ಮಾರುವುದಕ್ಕೆ" ಎಂದು ರಾಮಯ್ಯ ಉದಾಸೀನವಾಗಿಯೇ ಇರುತ್ತಿದ್ದ. ಒಂದು ಸಲ ಬಹಳ ಕಷ್ಟ ಬಂದಿತು. ಮೂರು ನಾಲ್ಕು ದಿನ ಕಳೆದರೂ ಕೂಲಿ ಸಿಗಲೇ ಇಲ್ಲ. ಊಟವೇ ಇಲ್ಲದೆ, ದಂಪತಿಗಳು ಬಳಲುವ ಸ್ಥಿತಿ ಬಂದಿತು. ಆಗ ಸೀತಮ್ಮನ ವರಾತ ತುಂಬಾ ಹೆಚ್ಚಾಯಿತು. ಸರಿ, ದೇವರಿಚ್ಛೆಯಂತೆ ಆಗಲಿ ಎಂದು ರಾಮಯ್ಯ ಗಟ್ಟಿಮನಸ್ಸು ಮಾಡಿ, ಸತ್ಯಪುರಿಗೆ ಹೋಗಲು ನಿಶ್ಚಯಿಸಿದ. ಬಹಳ ದೂರ ನಡೆಯಬೇಕಾಗಿದ್ದುದರಿಂದ ಸೀತಮ್ಮ ನೆರೆಯವರಲ್ಲಿ ಸ್ವಲ್ಪ ಹಿಟ್ಟು ಬೇಡಿ ತಂದು, ಎರಡು ರೊಟ್ಟಿ ಮಾಡಿಕೊಟ್ಟಳು. ರಾಮಯ್ಯ ಅವನ್ನು ತೆಗೆದುಕೊಂಡು ಮರುದಿನ ಹೊತ್ತಿಗೆ ಮೊದಲೇ ಹೊರಟ. ಮಧ್ಯಾಹ್ನದ ವೇಳೆಗೆ ಅವನು ಒಂದು ಕೆರೆಯ ಹತ್ತಿರ ಬಂದ. ಹಸಿವು, ಆಯಾಸ ಎರಡೂ ಆಗಿತ್ತು. ಕೆರೆಯಲ್ಲಿ ಕೈಕಾಲು ತೊಳೆದು ರೊಟ್ಟಿ ತಿನ್ನಲು ಕುಳಿತ. ಸಾಯುವ ಸ್ಥಿತಿಯಲ್ಲಿದ್ದ ಒಂದು ಬಡಕಲು ನಾಯಿ ಅಲ್ಲಿಗೆ ಬಂದಿತು. ನಾಲಗೆ ಹೊರಚಾಚಿ ಅವನ ರೊಟ್ಟಿಯನ್ನೇ ನೋಡುತ್ತಾ ನಿಂತಿತು. ರಾಮಯ್ಯನಿಗೆ ಅದರ ಸ್ಥಿತಿ ನೋಡಿ ದುಃಖ ಉಕ್ಕಿ ಬಂತು. ತಡೆಯಲಾಗದೆ ಅದಕ್ಕೆ ಒಂದು ರೊಟ್ಟಿ ಕೊಟ್ಟ. ಅದನ್ನು ತಿಂದು ತೃಪ್ತಿಯಾಗದೆ ಅದು ಇನ್ನೂ ನೋಡುತ್ತಲೇ ಇತ್ತು. ರಾಮಯ್ಯ ತಾನೇ ಮೂರು ದಿನದಿಂದ ಏನೂ ತಿಂದಿರಲಿಲ್ಲ, ಬಹಳ ದೂರದಿಂದ ನಡೆದು ಬಂದಿದ್ದ. ಹಸಿವು ಆಯಾಸಗಳಿಂದ ತಾನೇ ಸಾಯುವಂತಾಗಿದ್ದ. ಆದರೂ ಆ ನಾಯಿಯ ಸ್ಥಿತಿಗೆ ಮರುಗಿ ಇದ್ದ ಇನ್ನೂ ಒಂದು ರೊಟ್ಟಿಯನ್ನು ಕೊಟ್ಟುಬಿಟ್ಟ. ನಾಯಿ ಅದನ್ನೂ ತಿಂದು ಬಾಲ ಅಲ್ಲಾಡಿಸುತ್ತಾ ಹೊರಟುಹೋಯಿತು. ರಾಮಯ್ಯ ಕೆರೆಗೆ ಹೋಗಿ ಹೊಟ್ಟೆ ತುಂಬಾ ನೀರು ಕುಡಿದ. ತನ್ನ ಪ್ರಯಾಣ ಮುಂದುವರೆಸಿ ಸತ್ಯಪುರಿ ತಲುಪಿದ. ಅಲ್ಲಿ ಇಲ್ಲಿ ವಿಚಾರಿಸಿ ಪುಣ್ಯದ ವ್ಯಾಪಾರಿ ಧರ್ಮಯ್ಯನ ಮನೆಗೆ ಬಂದ. ವ್ಯಾಪಾರಿ ಊಟ ಮಾಡಲು ಹೊರಟುಹೋಗಿದ್ದ. ಅಲ್ಲೇ ಕಾದು ಕುಳಿತಿದ್ದ ರಾಮಯ್ಯ, "ಪುಣ್ಯ ಕೊಡು ಎಂದರೆ ಏನು ಕೊಡುವುದು? ನನ್ನಂಥ ಬಡವ ಏನು ಪುಣ್ಯ ತಾನೆ ಗಳಿಸಬಲ್ಲ?" ಎಂದು ಚಿಂತಿಸುತ್ತಿದ್ದ. ಊಟ ಮುಗಿಸಿ ಬಂದ ವ್ಯಾಪಾರಿ ಇವನನ್ನು ನೋಡಿ, "ಏನು ಪುಣ್ಯ



ಚಿತ್ರ : ವಿವೇಕ್ ಪ್ರಭು

ತಂದಿದ್ದೀಯಪ್ಪಾ?" ಎಂದು ಕೇಳಿದ. "ಸ್ವಾಮಿ, ನಮ್ಮಂಥವರ ಹತ್ತಿರ ಏನು ಪುಣ್ಯವಿದ್ದೀತು? ನೀವೇ ಕರುಣೆ ತೋರಿ ಅಷ್ಟು ಹಣ ಕೊಟ್ಟರೆ, ಹೇಗೋ ಹೊಟ್ಟೆಹೊರೆದುಕೊಳ್ಳುವೆ. ಅನುಕೂಲವಾದಾಗ ತಮ್ಮ ಋಣ ತೀರಿಸುವೆ" ಎಂದು ರಾಮಯ್ಯ ಒಂದೇ ಸಮನೆ ಗೋಗರೆದ. ವ್ಯಾಪಾರಿ, "ನೆನಪಿಸಿಕೋ" ಎಂದು ಒತ್ತಾಯ ಮಾಡುತ್ತಲೇ ಇದ್ದ. ಕೊನೆಗೆ ರಾಮಯ್ಯ ತಾನು ದಾರಿಯಲ್ಲಿ ನಾಯಿಗೆ ರೊಟ್ಟಿ ಕೊಟ್ಟ ವಿಷಯ ನೆನಪಿಸಿಕೊಂಡು, ಅದನ್ನು ತಿಳಿಸಿದ. ಧರ್ಮಯ್ಯ ಅದನ್ನು ಒಂದು ಚೀಟಿಯಲ್ಲಿ ಬರೆದು ತಕ್ಕಡಿಯ ಒಂದು ತಟ್ಟೆಯಲ್ಲಿಟ್ಟ. ಉದಾಸೀನದಿಂದ ಒಂದು ರೂಪಾಯಿ ನಾಣ್ಯವನ್ನು ಇನ್ನೊಂದು ತಟ್ಟೆಗೆ ಹಾಕಿದ. ತಟ್ಟೆ ಮೇಲೇಳಲಿಲ್ಲ. ಹೀಗೇ ಒಂದೊಂದೇ ನಾಣ್ಯ ಹಾಕತೊಡಗಿದ. ಉಹ್ಹೂಂ, ತಟ್ಟೆ ಮೇಲೇಳಲೇ ಇಲ್ಲ. ವ್ಯಾಪಾರಿಯ ಐಶ್ವರ್ಯದ ಮುಕ್ಕಾಲುಭಾಗ ಹಾಕಿದರೂ ತಟ್ಟೆ ಮೇಲೇರಲಿಲ್ಲ. ಧರ್ಮಯ್ಯನಿಗೆ ಗಾಬರಿಯಾಯಿತು. ಆ ಪುಣ್ಯವನ್ನು ಕೊಂಡುಕೊಂಡು ತಾನು 'ಪಾಪರ್' ಆಗಲು ಅವನು ಇಷ್ಟಪಡಲಿಲ್ಲ. ಅದಕ್ಕೆ ಧರ್ಮಯ್ಯ ರಾಮಯ್ಯನಿಗೆ ಅವನ ಪುಣ್ಯವನ್ನು ಕೊಂಡುಕೊಳ್ಳಲು ತಾನು ಸಿದ್ಧನಿಲ್ಲವೆಂದು ಹೇಳಿ ರಾಮಯ್ಯನನ್ನು ಬರಿಕೈಯಲ್ಲಿ ಹಿಂದಿರುಗಿ ಕಳಿಸಿಬಿಟ್ಟ. ರಾಮಯ್ಯನಿಗೆ ವಿಪರೀತ ಸಂಕಟವಾಯಿತು. ನಿರಾಸೆ, ನೋವು, ಆಯಾಸಗಳಿಂದ ಭಾರವಾದ ಹೆಜ್ಜೆಯಿಡುತ್ತಾ ಊರಿನ ಕಡೆ ಹೊರಟ. ಮತ್ತೆ ಕೆರೆಯಲ್ಲಿ ಕೈಕಾಲು ತೊಳೆದು ಹೊಟ್ಟೆ ತುಂಬಾ ನೀರು ಕುಡಿದ. "ಆಸೆಯಿಂದ ಕಾಯುತ್ತಿರುವ ಹೆಂಡತಿಗೆ ಏನು ಹೇಳುವುದು?" ಎಂದು ಯೋಚಿಸಿದ. ಕೆರೆಯ ದಡದಲ್ಲಿದ್ದ ಕಲ್ಲುಗಳನ್ನು ಡಬ್ಬಿಗೆ ತುಂಬಿಕೊಂಡು ಹೊರಟ. ಬಾಗಿಲಿನಲ್ಲಿಯೇ ಕಾಯುತ್ತಾ ನಿಂತಿದ್ದ ಹೆಂಡತಿಯ ಕೈಗೆ ಡಬ್ಬಿಯ ಗಂಟನ್ನು ಕೊಟ್ಟು, ಒಳಗೆ ಹೊರಟುಹೋದ. ಅವಳ ಪ್ರಶ್ನೆಗಳಿಗೆ ಉತ್ತರ ಕೊಡಲೇ ಇಲ್ಲ. ಒಳಗೆ ಹೋಗಿ ಡಬ್ಬಿ ತೆಗೆದು ನೋಡಿದ ಸೀತಮ್ಮ ಆನಂದದಿಂದ ಕೂಗಿಕೊಂಡಳು. "ಎಂಥ ಹೊಳೆಯುವ ರತ್ನಗಳು ನೋಡಬನ್ನಿ!" ಎಂದಳು. ರಾಮಯ್ಯ, "ನಿನಗೆಲ್ಲೋ ಭ್ರಮೆ, ಅವೆಲ್ಲಾ ಕಲ್ಲುಗಳು. ಸುಮ್ಮನೆ ಆಚೆ ಚೆಲ್ಲು" ಎಂದ. "ಇಲ್ಲ, ಇಲ್ಲ, ಇವೆಲ್ಲಾ ತುಂಬಾ ಬೆಲೆ ಬಾಳುವ ರತ್ನಗಳು, ಇಲ್ಲಿ ಬಂದು ನೋಡಿ!" ಎಂದು ಪತಿಯನ್ನು ಒತ್ತಾಯಿಸಿದಳು. ಬಲವಂತದಿಂದ ಎದ್ದು ಬಂದು ನೋಡಿದ ರಾಮಯ್ಯ ತನ್ನ ಕಣ್ಣನ್ನು ತಾನೇ ನಂಬದಾದ. ಅವನು ಕೆರೆಯ ದಡದಲ್ಲಿ ಡಬ್ಬಿಗೆ ತುಂಬಿದ್ದ ಒಂದೊಂದು ಕಲ್ಲೂ ಅತ್ಯಂತ ಬೆಲೆಬಾಳುವ ಹರಳುಗಳಾಗಿದ್ದವು. ನಾಯಿಗೆ ತಾನು ಮಾಡಿದ ದಾನಕ್ಕೆ ಗಳಿಸಿದ ಅಕ್ಷಯಪುಣ್ಯಕ್ಕೆ ರಾಮಯ್ಯ ಮಾರುಹೋದ. ತನಗೆ ದೊರಕಿದ ಎಲ್ಲಾ ಐಶ್ವರ್ಯವನ್ನೂ ದಾನಧರ್ಮಗಳಿಗಾಗಿಯೇ ಬಳಸಿ ಕೀರ್ತಿವಂತನಾದ, ಪುಣ್ಯವಂತನಾದ. •

## ಸಂಸ್ಕೃತಿ ಪರಿಚಯ –೧

*ಆಂಗ್ಲ ಮೂಲ* : ಸೀತಾ ಲಖಾನಿ ; *ಕನ್ನಡ ರೂಪಾಂತರ* : ಡಾ. ಕೆ.ಎಲ್ ಪ್ರಸನ್ನಾಕ್ಷಿ

### ಹಿಂದೂಧರ್ಮ ಎಂದರೇನು?

ಸಾವಿರಾರು ವರ್ಷಗಳಿಂದಲೂ ಭಾರತದಲ್ಲಿ ಇರುವ ಧರ್ಮವೇ 'ಹಿಂದೂಧರ್ಮ'. ಈಗ ಪ್ರಪಂಚದ ಎಲ್ಲಾಕಡೆ ಹಿಂದೂಧರ್ಮವನ್ನು ಅನುಸರಿಸುವ ಜನ ಇದ್ದಾರೆ. ಇವರನ್ನು 'ಹಿಂದೂಗಳು' ಎಂದು ಕರೆಯುತ್ತಾರೆ.



### ಸಿಂಧುವಿನಿಂದ 'ಹಿಂದೂ'

ತುಂಬಾ ಹಳೆಯ ಕಾಲದಿಂದಲೂ ನಮ್ಮ ಭಾರತದೇಶದಲ್ಲಿರುವ ಒಂದು ನದಿಯ ಹೆಸರು 'ಸಿಂಧು'. ಗ್ರೀಕರಿಗೆ ಈ ಹೆಸರನ್ನು ಸರಿಯಾಗಿ ಹೇಳುವುದಕ್ಕೆ ಬರುತ್ತಿರಲಿಲ್ಲ. ಅವರ ಬಾಯಿಯಲ್ಲಿ ಅದು 'ಹಿಂದೂ' ಎಂದಾಯಿತು. ಹೀಗಾಗಿ ಈ ನದಿಯ ತಟದಲ್ಲಿ ವಾಸಮಾಡುತ್ತಿದ್ದ ಜನರನ್ನೂ 'ಹಿಂದೂ' ಎಂದೇ ಕರೆಯತೊಡಗಿದರು.

ಹಿಂದೂಗಳು ತಮ್ಮ ಆಚರಣಾವಿಧಾನವನ್ನು 'ಧರ್ಮ' ಎನ್ನುವರು. 'ಪ್ರಪಂಚ ಮತ್ತು ಅದರಲ್ಲಿ ನಮ್ಮ ಸ್ಥಾನ' ಮತ್ತು 'ಪ್ರಪಂಚಕ್ಕೂ ನಮಗೂ ಇರುವ ಸಂಬಂಧ' – ಇವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರಂತೆ ನಡೆಯುವುದನ್ನೇ 'ಧರ್ಮ' ಎನ್ನುತ್ತಾರೆ. ಹಿಂದೂಧರ್ಮ ಎಲ್ಲರನ್ನೂ ಮತ್ತು ಎಲ್ಲವನ್ನೂ ಪ್ರೀತಿ, ಗೌರವಗಳಿಂದ ಕಾಣುವ ಗುಣವನ್ನು ನಮ್ಮಲ್ಲಿ ಬೆಳೆಸುತ್ತದೆ. ನಿಜವಾದ ಹಿಂದೂ ಆದವನು ತಾನು ಒಳ್ಳೆಯವನಾಗಿದ್ದು, ಬೇರೆಯವರಿಗೂ ಒಳ್ಳೆಯದನ್ನು